'ವಿದೇಶದಲ್ಲಿ ಜನರಿಗೆ ಉತ್ತಮ ರೀತಿಯ ಮಸಾಜ್ ಮಾಡಿ. ಕೈರಾಲಿ ಮಸಾಜ್ ಪಾರ್ಲರ್ ಆರಂಭಿಸಿ, ನಿಮ್ಮ ಕೇರಳದ ಹೆಸರನ್ನು ಬೆಳಗಿಸಿ...'

ನಾನು ಗೆದ್ದ ಮುಗುಳ್ನಗೆಯೊಂದಿಗೆ ಸರ್ಟಿಫಿಕೇಟನ್ನು ನೋಡಿದೆ. ಅದರಲ್ಲಿ ಹೀಗೆ ಬರೆಯಲಾಗಿತ್ತು:

'ನ್ಯಾನ್ಸಿ ಕೋಶಿ ಲೆರಾಯ್ ಅವರು ಪಾರಂಪರಿಕ ಕೈರಾಲಿ ಮಸಾಜ್‌ನಲ್ಲಿ ಮೂವತ್ತು ವಾರಗಳ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.'

ಡಿಪ್ಲೊಮೊ ಸರ್ಟಿಫಿಕೇಟ್ ದೊರೆಯಿತು; ಆದರೆ ಪಾರ್ಲರ್ ನೌಕರಿಯನ್ನು, ಎಲ್ಲಿ ಮತ್ತು ಹೇಗೆ ಹುಡುಕಲಿ? ಈಗ ಇಲ್ಲಿಂದ ಮತ್ತೆ ಸಾಮಾನುಗಳನ್ನು ಪ್ಯಾಕ್ ಮಾಡಬೇಕಿತ್ತು.

## ಡೆನ್ಮಾರ್ಕ್ (ಯೂರೋಪ್)

ನಾವು ಭಾರತದಿಂದ ಬಹಳಷ್ಟನ್ನು ಹೊತ್ತು ಡೆನ್ಮಾರ್ಕ್‌ಗೆ ಬಂದೆವು. ಮಾರ್ಕೋ ಸಹ ಭಾರತದ ಪ್ರವಾಸ ತನ್ನ ಯಶಸ್ಸು ಎಂದು ತಿಳಿದ. ಇಲ್ಲಿ ತನ್ನ ಸ್ನೇಹಿತರು–ಪರಿಚಿತರೊಂದಿಗೆ ಕೂತು ಭಾರತದ ಬಗ್ಗೆ ಹೇಳುತ್ತಿದ್ದ; ಒಳ್ಳೆಯ ಮತ್ತು ಕೆಟ್ಟ ಸಂಗತಿಗಳನ್ನೂ ಹೇಳುತ್ತಾ ನಿಂದಿಸುತ್ತಿದ್ದ, 'ಭಾರತದ ಜನರಲ್ಲಿ ಇಂಗ್ಲಿಷ್ ಬಗ್ಗೆ ಇಷ್ಟು ಕಾಂಪ್ಲೆಕ್ಸ್ ಏಕೆಂದು ತಿಳಿಯುತ್ತಿಲ್ಲ. ಒಬ್ಬ ರಿಕ್ಷಾವಾಲಾ ಸಹ ತನ್ನ ಮಗುವಿಗೆ ಖಾಸಗಿ ಇಂಗ್ಲಿಷ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿಸಲು ಬಯಸುತ್ತಾನೆ'. ಇದರೊಂದಿಗೆ ಅವನು ಭಾರತವನ್ನು ಹೊಗಳುತ್ತಲೂ ಇದ್ದ. ಒಮ್ಮೆ ಅವನು, ಅಮೆರಿಕ ಮತ್ತು ಭಾರತವನ್ನು ಎದುರಿಸುವವರು ಯಾರಿಲ್ಲ ಎಂದೂ ಹೇಳಿದ. ಒಟ್ಟಿನಲ್ಲಿ ಅವನಿಗೆ ಭಾರತದಲ್ಲಿ ವಾಸಿಸುವುದು ಅಮೆರಿಕಕ್ಕಿಂತ ಹೆಚ್ಚು ಹಿತವೆನಿಸಿತು. ನೀಲ್ ವಿಷಯದಲ್ಲಿ ಹೇಳಬೇಕೆಂದರೆ, ಅವನು ಭಾರತದಲ್ಲಿ ಸಂಪೂರ್ಣವಾಗಿ ಹೊಂದಿಕೊಂಡಿದ್ದ, ಮರಳಿ ಡೆನ್ಮಾರ್ಕ್‌ಗೆ ಬಂದಾಗ ಇಲ್ಲಿಗೂ ಹೊಂದಿಕೊಂಡ. ಇದು ಅವನ ವಯಸ್ಸಿನ ವಿಶೇಷವಾಗಿತ್ತು.

ಜಗತ್ತಿನ ಯಾವುದೇ ಸ್ಥಳವನ್ನು ಇದ್ದಕ್ಕಿದ್ದಂತೆ ಉತ್ಕೃಷ್ಟ ಮತ್ತು ನಿಕೃಷ್ಟವೆಂದು ಘೋಷಿಸಲಾಗದು, ಹಾಗೇನಾದರೂ ಮಾಡಿದರೆ ಅದು ಸುಳ್ಳು ಮತ್ತು ಅಪಕ್ವ ಹೇಳಿಕೆಯಾಗುವುದು. ಎಲ್ಲೆಡೆಯಲ್ಲೂ ನಿಮಗೆ ಒಳ್ಳೆಯ ಸಂಗತಿಗಳೇ ಲಭಿಸುತ್ತವೆ ಹಾಗೂ ಕೆಲವು ವಿಷಯಗಳೊಂದಿಗೆ ನೀವು ಹೊಂದಾಣಿಕೆ ಮಾಡಿಕೊಳ್ಳಬೇಕಾಗುವುದು. ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೀರಿ ಎಂಬುದು ತೀರಾ ವೈಯಕ್ತಿಕ ನಿರ್ಣಯವಾಗಿದ್ದು ಅದು ನಿಮ್ಮ ಪರಿಸ್ಥಿತಿಗಳು, ಆಯ್ಕೆಗಳು ಮತ್ತು ಸಮಯವನ್ನು ಅವಲಂಬಿಸುತ್ತದೆ. ಜೀವನ ಸಾಗುತ್ತಿರುವಂತೆ ಅವಶ್ಯಕತೆಗಳು ಸಹ ಬದಲಾಗುತ್ತವೆ, ಅಭಿಪ್ರಾಯಗಳೂ ಬದಲಾಗುತ್ತವೆ. ನನ್ನ ಜೀವನದ ಆರು ವರ್ಷಗಳನ್ನು ಕೀನ್ಯಾದಲ್ಲಿ, ಮೂರು ವರ್ಷಗಳನ್ನು ಸಂಯುಕ್ತ ರಾಜ್ಯ ಅಮೆರಿಕದಲ್ಲಿ ಕಳೆದೆ. ಈಗ ಭಾರತದಲ್ಲಿ ಎರಡು ವರ್ಷಗಳಿದ್ದು, ಡೆನ್ಮಾರ್ಕ್‌ಗೆ ಮರಳಿ ಬಂದಿದ್ದೇನೆ. ಒಟ್ಟಿನಲ್ಲಿ ಇಲ್ಲಿಯೂ ಸಂತೋಷದಲ್ಲಿದ್ದೇನೆ, ಆದರೆ ಆಗಾಗ ಆಫ್ರಿಕಾ, ಅಮೆರಿಕ ಮತ್ತು ಭಾರತದಲ್ಲಿ ಕಳೆದ ಜೀವನದ ಬಗ್ಗೆ ಯೋಚಿಸಿದಾಗ, ಅನೇಕ ವಿಷಯಗಳನ್ನು ಮಿಸ್ ಮಾಡಿಕೊಳ್ಳುತ್ತೇನೆ.

ಡೆನ್ಮಾರ್ಕ್ ನನ್ನ ದೇಶವಾಗಿರಲಿಲ್ಲ, ಮಾರ್ಕೋನ ದೇಶವೂ ಆಗಿರಲಿಲ್ಲ, ಆದರೂ ಇನ್ನು ಎಲ್ಲೂ ಹೋಗದೆ, ಡೆನ್ಮಾರ್ಕ್‌ನಲ್ಲಿಯೇ ಕಾಯಂ ಆಗಿ ನೆಲೆಸುತ್ತೇವೆ, ಅಲೆಮಾರಿ ಜೀವನಕ್ಕೆ ಅಂತ್ಯ ಹಾಡುತ್ತೇವೆ ಎಂದು ನಿರ್ಧರಿಸಿದೆವು. ನಾವು ಕೋಪನ್‌ಹೇಗನ್ನಿನ ಉಪನಗರ 'ಹೆಲ್ಲೆರೂಪ'ದಲ್ಲಿ ಮನೆಯೊಂದನ್ನು ಖರೀದಿಸಿದೆವು. ಅದು ಎರಡಂತಸ್ತಿನ ಮನೆಯಾಗಿತ್ತು. ನಾವು ಕೆಳಗಿನ ಅಂತಸ್ತಿನಲ್ಲಿದ್ದ ಮನೆಯನ್ನು ಖರೀದಿಸಿದೆವು. ಮೇಲಿನ ಅಂತಸ್ತಿನಲ್ಲಿ ಈ ಮೊದಲಿನಿಂದಲೇ ಕಾರ್ಲ್ ಮತ್ತು ಏಲ್ಫ್ ಎಂಬ ಇಬ್ಬರು ವಾಸಿಸುತ್ತಿದ್ದರು. ನಾನು ಬಿಲ್ಡಿಂಗ್‌ನಲ್ಲಿ ಕಸಕ್ಕಾಗಿ ಇಟ್ಟ ರಿಸೈಕಲಿಂಗ್ ಡಸ್ಟ್‌ಬಿನ್ ಬಗ್ಗೆ ಒಂದೆರಡು ವಿಷಯಗಳನ್ನು ಕೇಳಬೇಕಾಗಿತ್ತು, ಹೀಗಾಗಿ ಮೆಟ್ಟಿಲುಗಳನ್ನು ಹತ್ತಿ ಕಾರ್ಲ್ ಮತ್ತು ಏಲ್ಫ್‌ರ ಮನೆಗೆ ಹೋದೆ. ಕಾರ್ಲ್ ಬಾಗಿಲನ್ನು ತೆರೆದ. ನನ್ನ ನೋಡಿ ಮೊದಲು ಗಾಬರಿಗೊಂಡ, ನಂತರ ಮುಗುಳ್ನಕ್ಕ. ಏಲ್ಫ್ ಹೊರಗೆ ಬಾಲ್ಕನಿಯಲ್ಲಿ ಕೂತು ಸಿಗಾರ್ ಸೇದುತ್ತಿದ್ದ. ನನ್ನನ್ನು ನೋಡಿ ಮನೆಯೊಳಗೆ ಬಂದ. ಕಾರ್ಲ್, ಏಲ್ಫ್‌ಗೆ ಹೇಳಿದ, 'ಇವರು ನ್ಯಾನ್ಸಿ ಲೆರಾಯ್, ನಮ್ಮ ಹೊಸ ನೈಬರ್...' ನಂತರ ಅವನು ನನಗೆ ಏಲ್ಫ್‌ನನ್ನು ಪರಿಚಯಿಸುತ್ತಾ ಹೇಳಿದ, 'ಇವನು ನನ್ನ ಹಸ್ಬೆಂಡ್!'

ಇಬ್ಬರೂ ನೀಳಕಾಯದ ಮತ್ತು ದಷ್ಟಪುಷ್ಟ ಪುರುಷರಾಗಿದ್ದರು. ಅವರು ಪತಿ–ಪತ್ನಿಯರು ಎಂಬುದನ್ನು ಕೇಳಿ ನನಗೆ ಆಶ್ಚರ್ಯವಾಯಿತು.

ಏಜೆಂಟ್ ನಮಗೆ, ಮೇಲಿನ ಅಂತಸ್ತಿನಲ್ಲಿ ಇಬ್ಬರಿದ್ದಾರೆ. ಅವರು ಗೇ–ಕಪಲ್, ಅವರನ್ನು ಭೇಟಿಯಾದ ನಂತರ ನನಗೆ ಇದು ತಿಳಿಯಿತು ಎಂದು ಹೇಳಿದ್ದ.

'ನಿಮ್ಮ ಮನೆ ಸಹ ನಮ್ಮ ಮನೆಯಂತೆಯೇ ವಿಶಾಲವಾಗಿದೆಯೇ?' ನಾನು ಕೇಳಿದೆ.

'ಬನ್ನಿ, ನಿಮಗೆ ಮನೆಯನ್ನೇ ತೋರಿಸುತ್ತೇವೆ...' ಕಾರ್ಲ್ ಶಿಷ್ಟಾಚಾರದಿಂದ ಹೇಳುತ್ತಾ, ಮನೆಯನ್ನು ತೋರಿಸಲು ಆರಂಭಿಸಿದ.

'ಇದು ನಮ್ಮ ಕಿಚನ್' – ಗೋಡೆಗಳು ಖಾಲಿಯಿದ್ದವು, ಒಂದು ಪೇಂಟಿಂಗ್ ಮಾತ್ರ ಹಾಕಲಾಗಿತ್ತು, ಅಲಂಕಾರದ ಬಲ್ಬ್‌ಗಳನ್ನು ಇಳಿ ಬಿಡಲಾಗಿತ್ತು.

'ನನಗೆ ಕಪ್‌ಬೋರ್ಡ್ ಇಷ್ಟವಾಗಲ್ಲ' ಕಾರ್ಲ್ ಹುಡುಗಿಯರಂತೆ ಬಳುಕುತ್ತಾ ಹೇಳಿದ.

'ಇದು ನಮ್ಮ ಬೆಡ್‌ರೂಮ್. ನಾವು ಮಾಸ್ಟರ್ ಬೆಡ್‌ರೂಮನ್ನು ಉಪಯೋಗಿಸುವುದಿಲ್ಲ, ಈ ಚಿಕ್ಕ ಬೆಡ್‌ರೂಮಿನಲ್ಲೇ ಮಲಗ್ತೀವಿ. ಇದು ನಮಗೆ ಹೆಚ್ಚು ಆರಾಮದಾಯಕವಾಗಿದೆ' ಕಾರ್ಲ್ ಮತ್ತೆ ಬಳುಕಿದ.

ಒಂದು ಚಿಕ್ಕ ಬೆಡ್‌ರೂಮಿನಲ್ಲಿ ಒಂದು ಡಬಲ್‌ಬೆಡ್ ಹಾಕಲಾಗಿತ್ತು. ಅಲ್ಲಿ ಇಬ್ಬರು ಪುರುಷರು ಮಲಗಿ ಸರಸ ಸಲ್ಲಾಪವಾಡುವುದನ್ನು ಕಲ್ಪಿಸಿಕೊಂಡಾಗ ನನಗೆ ವಿಚಿತ್ರವೆನಿಸಿತು.

ನಾನು ಅವರ ಮನೆಯನ್ನು ಹೊಗಳಿದೆ. ಕಾರ್ಲ್ ಮತ್ತು ಏಲ್ಫ್‌ನೊಂದಿಗೆ ಒಳ್ಳೆಯ ಗೆಳೆತನ ಬೆಳೆಯಿತು. ಗೇ ಪರಿವಾರವೊಂದು ಹೇಗಿರುತ್ತದೆ ಎಂಬುದು ಮೊದಲ ಬಾರಿಗೆ ನನಗೆ ತಿಳಿಯಿತು. ಇಬ್ಬರೂ ವಿದ್ಯಾವಂತರಾಗಿದ್ದು ಉನ್ನತ ಹುದ್ದೆಗಳಲ್ಲಿದ್ದರು, ಶ್ರಮಜೀವಿಗಳಾಗಿದ್ದರು. ತಮ್ಮ ಮನೆಯನ್ನು ಸುಂದರವಾಗಿಟ್ಟುಕೊಳ್ಳುತ್ತಿದ್ದರು. ಕಾರ್ಲ್ ಹೆಂಡತಿಯ ಭೂಮಿಕೆಯನ್ನು ನಿರ್ವಹಿಸುತ್ತಿದ್ದರೆ, ಏಲ್ಫ್ ಪತಿಯಾಗಿದ್ದು ತನ್ನ ಕರ್ತವ್ಯವನ್ನು ಪಾಲಿಸುತ್ತಿದ್ದ. ಏಲ್ಫ್‌ಗೆ ಇಬ್ಬರು ಹೆಣ್ಣುಮಕ್ಕಳೂ ಇದ್ದರು, ದೊಡ್ಡ ಮಗಳಿಂದ ಒಬ್ಬ ಮೊಮ್ಮಗನೂ ಇದ್ದ; ಅಂದರೆ ಅವನು ಈ ಮೊದಲಿನಿಂದಲೇ ಗೇ ಆಗಿರಲಿಲ್ಲ ಅಥವಾ ಬೈಸೆಕ್ಷುಯಲ್ ಆಗಿದ್ದ; ಅಂದರೆ ಹೆಣ್ಣು ಮತ್ತು ಗಂಡು ಇಬ್ಬರೊಂದಿಗೂ ಇರುವವನಾಗಿದ್ದ. ನಾವು ಅವರ ವೈಯಕ್ತಿಕ ಜೀವನವನ್ನು ಹೆಚ್ಚು ಕೆದಕಲಿಲ್ಲ. ಕಾರ್ಲ್ ಏಲ್ಫ್‌ಗಿಂತ ಸುಮಾರು ಹತ್ತು ವರ್ಷ ಚಿಕ್ಕವನಿದ್ದ. ಅವನ ಹಾವಭಾವಗಳು ಹೆಣ್ಣಿನಂತಿದ್ದವು. ಮೊದಲ ನೋಟಕ್ಕೆ ಅವನು ಗಂಡಸಿನಂತೆಯೇ ತೋರುತ್ತಿದ್ದ, ಆದರೆ ಅವನ ಬಳಿ ಕೆಲವು ಕ್ಷಣಗಳಿದ್ದರೆ, ದಷ್ಟಪುಷ್ಟನಾಗಿದ್ದು, ಗಡ್ಡ–ಮೀಸೆ ಬಿಟ್ಟಿದ್ದ ಕಾರ್ಲ್, ಸುಂದರ ಹೆಣ್ಣಿನಂತೆ ಕಾಣುತ್ತಿದ್ದ. ಕಾರ್ಲ್ ನನ್ನ ಹತ್ತಿರದ ಸ್ನೇಹಿತರಲ್ಲಿ ಒಬ್ಬನಾದ. ನಾವಿಬ್ಬರು ಒಟ್ಟಿಗೆ ಖರೀದಿಗೆ ಹೋಗುತ್ತಿದ್ದೆವು, ನಮ್ಮ ಉಗುರುಗಳಿಗೆ ನೇಲ್‌ಪಾಲೀಶ್ ಮಾಡಿಕೊಂಡು, ಪ್ರೀತಿಯ ಪುರುಷರ ಬಗ್ಗೆ ಹರಟುತ್ತಿದ್ದೆವು.

ನಾನು ಜೀವನದಲ್ಲಿ ಮೊದಲ ಬಾರಿಗೆ ನನಗಾಗಿ ಮನೆಯೊಂದನ್ನು ಖರೀದಿಸಿದ್ದೆ. ನಾನು ತುಂಬು ಉತ್ಸಾಹದಿಂದ ಈ ಮನೆಯನ್ನು ಸಜ್ಜುಗೊಳಿಸಿ, ಒಂದು ಸುಂದರ ಮನೆಯಾಗಿ ಪರಿವರ್ತಿಸಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿಲಾಸಿ ಜೀವನವನ್ನು ನಡೆಸಲಾಗುತ್ತದೆ. ಆದರೆ ಆ ಜೀವನಶೈಲಿಯನ್ನು ಪಡೆಯಲು ಮನುಷ್ಯ ಕಠಿಣ ರೀತಿಯಲ್ಲಿ ಶ್ರಮವಹಿಸಬೇಕಾಗುತ್ತದೆ. ನೀಲ್‌ಗೆ ಆರು ವರ್ಷವಾಗಿತ್ತು. ಅವನು ಶಾಲೆಯಲ್ಲಿ ಹೆಚ್ಚು ವೇಳೆಯನ್ನು ಕಳೆಯುತ್ತಿದ್ದ. ನನ್ನೆದುರು ಮತ್ತೆ ಪ್ರಶ್ನೆ ಉದ್ಭವಿಸಿತು – ಈಗೇನು ಮಾಡಲಿ? ನನಗಿಷ್ಟವಾದ ಫೀಲ್ಡಿನಲ್ಲಿ ಕರಿಯರ್ ನಿರ್ಮಿಸಿಕೊಳ್ಳುವ ಬಗ್ಗೆ ಯೋಚಿಸಿದೆ. ನನ್ನ ಹಳೆಯ ಶಾಲೆಗೆ ಮತ್ತೆ ನೌಕರಿಗೆ ಅರ್ಜಿ ಹಾಕಿದೆ. ವೈಯಕ್ತಿಕವಾಗಿ ಎಲ್ಲರನ್ನೂ ಭೇಟಿಯಾಗಲು ಅಲ್ಲಿಗೆ ಹೋದೆ. ಈ ನಡುವೆ ಅಲ್ಲಿ ಸಾಕಷ್ಟು ಪರಿವರ್ತನೆಯಾಗಿತ್ತು. ಅಲ್ಲಿಯ ಲೀಡರ್ ಮತ್ತು ಸ್ಟಾಫ್ ಎಲ್ಲರೂ ಬದಲಾಗಿದ್ದರು. ದುರದೃಷ್ಟದಿಂದ ಅಲ್ಲಿ ನನಗೆ ನೌಕರಿ ಸಿಗಲಿಲ್ಲ. ಅಲ್ಲಿ ಈಗಲೂ ನನ್ನ ಮಾಜಿ ಸಹೋದ್ಯೋಗಿ ಡೇನಿಯೇಲಾ ಬೋಧಿಸುತ್ತಿದ್ದಳು; ಅವಳು ನನಗೆ, ನೀವು ನೌಕರಿಯನ್ನು ಬಿಡುವಾಗ ನಿಮ್ಮ ಬೋಧನೆ ಪರಿಣಾಮಕಾರಿಯಾಗಿರಲಿಲ್ಲ, ಅದಕ್ಕೇ ಇಲ್ಲಿ ನಿಮಗೆ ಮತ್ತೆ ನೌಕರಿ ಸಿಗಲಿಲ್ಲ, ನೀವು ರಜಗಳನ್ನು ಹೆಚ್ಚು ತೆಗೆದುಕೊಳ್ಳುತ್ತಿದ್ದಿರಿ, ಇದು ನಿಜವಾದ ಕಾರಣ ಎಂದಳು.

ವಿಷಯ ಕೇಳಿ ನನಗೆ ಕೆಡುಕೆನಿಸಿತು. ಆದರೆ